**ಸಾಮಾನ್ಯ ಸೂಚನೆಗಳು :**

1. ಇದು ಪ್ರಶ್ನೆ ಸಹಿತ ಉತ್ತರ ಪುಸ್ತಕವಾಗಿದೆ.
2. ಪ್ರತಿ ಪ್ರಶ್ನೆಗೂ ಉತ್ತರ ಬರೆಯಲು ಪ್ರಶ್ನೋತ್ತರ ಪುಸ್ತಕದಲ್ಲಿಯೇ ಸ್ಥಾವಕಾಶ ಮಾಡಿಕೊಡಲಾಗಿದೆ. ಉತ್ತರಗಳನ್ನು ನಿರ್ದಿಷ್ಟಪಡಿಸಿದ ಜಾಗದಲ್ಲಿಯೇ ಬರೆಯಬೇಕು.
3. ಈ ಪ್ರಶ್ನೋತ್ತರ ಪುಸ್ತಕವು 54 ಪ್ರಶ್ನೆಗಳನ್ನು ಹೊಂದಿದೆ, ಹೊಂದಿಸಿ ಬರೆಯಿರಿ ಪ್ರಶ್ನೆ ಸೇರಿದಂತೆ.
4. ಪರೀಕ್ಷಾರ್ಥಿಗಳು ಉತ್ತರಗಳನ್ನು ಪೆನ್ಸಿಲ್‌ನಲ್ಲಿ (ಸೀಸದ ಕಡ್ಡಿ) ಬರೆಯಬಾರದು. ಬರೆದರೆ ಅಂತಹ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
5. ಬಹು ಆಯ್ಕೆ, ಬಿಟ್ಟ ಸ್ಥಳ ತುಂಬುವ ಮತ್ತೆ ಹೊಂದಿಸುವ ಪ್ರಶ್ನೆಗಳಲ್ಲಿ . ಪರೀಕ್ಷಾರ್ಥಿಗಳು ತಿದ್ದಿ / ಹೊಡೆದು ಬರೆಯುವುದನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

---

I ಕೆಳಗಿನ ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಿದೆ. ಅವುಗಳಲ್ಲಿ ಒಂದು ಸರಿಯಾದ ಉತ್ತರವಿದೆ. ಅದನ್ನು ಆರಿಸಿ ಕೊಟ್ಟಿದ್ದ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ತಪ್ಪಿಲ್ಲದೆ ಬರೆಯಿರಿ. [15 × 1 = 15]

1. ರಾಣಿ – ಈ ಪದದ ಅನ್ಯಲಿಂಗ ರೂಪ.

(A) ಅರಸ (B) ದೊರೆ

(C) ಪ್ರಭು (D) ರಾಜ

2. ನಾಗರಿಕ – ಈ ಪದದ ಬಹುವಚನ ರೂಪ.

(A) ನಾಗರಿಕರು (B) ನಾಗರೀಕರು

(C) ನಾಗರಿಕಗಳು (D) ನಾಗರಿಕರುಗಳು

3. 'ಅವರು ಚೆನ್ನಾಗಿ ಬರೆದರೆ ಉತ್ತಮ ಅಂಕಗಳನ್ನು ಪಡೆಯುತ್ತಾರೆ'- ಈ ವಾಕ್ಯದಲ್ಲಿ ಬಂದಿರುವ ಸರ್ವನಾಮ ಪದ

(A) ಚೆನ್ನಾಗಿ (B) ಅವರು

(C) ಅಂಕಗಳನ್ನು (D) ಉತ್ತಮ

4. 'ಗತಿ' – ಈ ಪದದ ವಿರುದ್ಧಾರ್ಥ

(A) ನಿರ್ಗತಿ (B) ಸುಗತಿ

(C) ಪ್ರಗತಿ (D) ಅಧೋಗತಿ

www.StudyGuideIndia.com